# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 604 |
| ಸದಸ್ಯರ ಹೆಸರು | ಶ್ರೀ ಶಶೀಲ್ ಜಿ ನಮೋಶಿ<br>(ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ | 11-07-2023 |
| ಉತ್ತರಿಸುವ ಸಚಿವರು | ಕೃಷಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಪ್ರಸ್ತುತ ರಾಜ್ಯದಲ್ಲಿ ಪ್ರತಿ ವರ್ಷ ಉತ್ಪಾದನೆಯಾಗುತ್ತಿರುವ ಅಕ್ಕಿ, ರಾಗಿ, ಜೋಳ ಮತ್ತು ಗೋಧಿಯ ಪ್ರಮಾಣ ಎಷ್ಟು: | 2021-22ನೇ ಸಾಲಿನ ಅಂತಿಮ ಉತ್ಪಾದನೆ ಅಂದಾಜು ವರದಿಯನ್ವಯ ರಾಜ್ಯದಲ್ಲಿ ಉತ್ಪಾದನೆಯಾಗಿರುವ ಅಕ್ಕಿ, ರಾಗಿ, ಜೋಳ ಮತ್ತು ಗೋಧಿಯ ಪ್ರಮಾಣ ಈ ಕೆಳಗಿನಂತಿದೆ.<br><br>(ಉತ್ಪಾದನೆ ಲಕ್ಷ ಟನ್‌ಗಳಲ್ಲಿ)<br>ಬೆಳೆ/ ವರ್ಷ — **2021-22**<br>ಅಕ್ಕಿ — 44.99<br>ರಾಗಿ — 11.27<br>ಜೋಳ — 7.33<br>ಗೋಧಿ — 2.12 |
| ಆ) | ಸರ್ಕಾರವು ರೈತರಿಂದ ಅಕ್ಕಿ, ರಾಗಿ, ಜೋಳ ಮತ್ತು ಗೋಧಿಯನ್ನು ಖರೀದಿಸುತ್ತಿದೆಯೇ; ಹೌದಾದಲ್ಲಿ, ಯಾವ ಯಾವ ದರದಲ್ಲಿ ಈ ಧಾನ್ಯಗಳನ್ನು ರೈತರಿಂದ ಖರೀದಿಸಲಾಗುತ್ತಿದೆ; | ಕೇಂದ್ರ ಸರ್ಕಾರದ ಆಹಾರ ಮತ್ತು ಸಾರ್ವಜನಿಕ ವಿತರಣಾ ಇಲಾಖೆಯು 2023-24 ನೇ ಸಾಲಿನಲ್ಲಿ ಭತ್ತ, ರಾಗಿ ಮತ್ತು ಬಿಳಿಜೋಳ ಆಹಾರ ಧಾನ್ಯಗಳಿಗೆ ಈ ಕೆಳಗಿನಂತೆ ಬೆಂಬಲ ಬೆಲೆ ನಿಗಧಿಪಡಿಸಿದೆ.<br><br>ಆಹಾರಧಾನ್ಯ — ನಿಗಧಿಪಡಿಸಿದ ಬೆಲೆ (ಪ್ರತಿ ಕ್ವಿಂಟಾಲ್‌ಗೆ ರೂ.ಗಳಲ್ಲಿ)<br>ಭತ್ತ — 2183<br>ಭತ್ತ (ಗ್ರೇಡ್-ಎ) — 2203<br>ರಾಗಿ — 3846<br>ಬಿಳಿಜೋಳ — 3180<br>ಬಿಳಿಜೋಳ (ಮಾಲ್ದಂಡಿ) — 3225 |

| | | |
|---|---|---|
| | | ಕರ್ನಾಟಕ ರಾಜ್ಯ ಉಗ್ರಾಣ ನಿಗಮವು ರೈತರಿಂದ ಅಕ್ಕಿ ರಾಗಿ ಜೋಳ ಮತ್ತು ಗೋದಿಯನ್ನು ಖರೀದಿಸಿರುವುದಿಲ್ಲ. |
| ಇ) | ಪ್ರಸ್ತುತ ಸರ್ಕಾರದಲ್ಲಿ ದಾಸ್ತಾನಾಗಿರುವ ಅಕ್ಕಿ, ರಾಗಿ, ಜೋಳ ಮತ್ತು ಗೋಧಿಯ ಪ್ರಮಾಣ ಎಷ್ಟು: | 2022-23ನೇ ಸಾಲಿನ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿ ಏಜೆನ್ಸಿಗಳು ರೈತರಿಂದ ಖರೀದಿಸಿ ಕರ್ನಾಟಕ ರಾಜ್ಯ ಉಗ್ರಾಣ ನಿಗಮದಲ್ಲಿ ದಾಸ್ತಾನಿರಿಸಿದ ರಾಗಿ ಒಟ್ಟು 3,65,460.39 ಮೆ.ಟನ್, ಬಿಳಿಜೋಳ 65,889.62 ಮೆ.ಟನ್ ಮುಂದುವರೆದು, ಬೆಂಬಲ ಬೆಲೆ ಯೋಜನೆಯಡಿ ಅಕ್ಕಿ ಮತ್ತು ಗೋದಿ ಸರಕುಗಳು ರಾಜ್ಯ ಉಗ್ರಾಣ ನಿಗಮದಲ್ಲಿ ದಾಸ್ತಾನಿಸಿರುವುದಿಲ್ಲ. |
| ಈ) | ಬೇರೆ ಬೇರೆ ರಾಜ್ಯಗಳಿಗೂ ರಾಜ್ಯದಿಂದ ಧಾನ್ಯಗಳನ್ನು ಮಾರಾಟ ಮಾಡಲಾಗುತ್ತಿದೆಯೇ; ಹಾಗಿದ್ದಲ್ಲಿ, ಎಷ್ಟು ಪ್ರಮಾಣದಲ್ಲಿ ಯಾವ ಯಾವ ಧಾನ್ಯಗಳನ್ನು ಯಾವ ಯಾವ ರಾಜ್ಯಗಳಿಗೆ ರಫ್ತು ಮಾಡಲಾಗುತ್ತಿದೆ? (ವಿವರ ನೀಡುವುದು) | ಅನ್ವಯಿಸುವುದಿಲ್ಲ |

ಸಂಖ್ಯೆ: AGRI/98/ACT/2023

(ಎನ್. ಚಲುವರಾಯಸ್ವಾಮಿ)
ಕೃಷಿ ಸಚಿವರು